‘ಪಪ್ಪಾ, ನೀವು ಒಂಟಿಯಾಗಿರುತ್ತೀರಿ, ನಿಮಗಾಗಿ ಒಬ್ಬಳು ಗರ್ಲ್‌ಫ್ರೆಂಡನ್ನು ಹುಡುಕಿಕೊಳ್ಳಿ. ಈಗ ನೀವೆಲ್ಲಿರುವಿರಿ?’ ಎಂದು ನನ್ನನ್ನು ಕಾಡಿಸುತ್ತಿದ್ದರು. ನಾನು ಅವರ ಬಗ್ಗೆ ಯೋಚಿಸಲಿಲ್ಲ. ನನ್ನ ಜೀವನದ ಶೈಲಿ ಹೀಗಾಗಬೇಕೆ? ಆದರೆ ಯಾರ ಮೇಲೂ ನನ್ನ ಅಧಿಕಾರವಿರಲಿಲ್ಲ. ನಾನು ಕೆಲವು ತಪ್ಪುಗಳನ್ನು ಮಾಡಿದೆ ಎಂಬುದು ನನಗೆ ಗೊತ್ತಿದೆ. ಆದರೆ ಪ್ರತಿಯೊಂದು ಪರಿಸ್ಥಿತಿಯಲ್ಲಿ, ಒಳಿತನ್ನೇ ಮಾಡಲು ಶಕ್ತಿಮೀರಿ ಪ್ರಯತ್ನಿಸಿದೆ.

ಇಂದು ನಾನು ತೀರ್ಥಯಾತ್ರೆಗೆ ಹೊರಟಿದ್ದೇನೆ. ದೇವರನ್ನು ಸಾಕ್ಷಿಯಾಗಿಟ್ಟುಕೊಂಡು ನನ್ನೆಲ್ಲಾ ದೋಷಗಳನ್ನು ಒಪ್ಪಿಕೊಳ್ಳುತ್ತೇನೆ. ತಪ್ಪುಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ. ದೇವರೇ, ನನ್ನನ್ನು ಕ್ಷಮಿಸು...

## ಕರೀನಾ ಸ್ವಯಂವರ

ರೇಡಿಯೇಶನ್ನಿನ ಪ್ರತಿಯೊಂದು ಸಿಟಿಂಗ್ ನೀನಾಳನ್ನು ದಣಿಸುತ್ತಿತ್ತು. ಅವಳದು ವಿಚಿತ್ರ ಪರಿಸ್ಥಿತಿಯಾಗಿತ್ತು; ಅವಳ ಎಲುಬುಗಳು, ನಾಡಿಗಳು ಮತ್ತು ಅಂಗಾಂಗಗಳನ್ನು ಟ್ಯೂಮರ್ ಒತ್ತುತ್ತಿತ್ತು; ಅವಳು ಭಯಾನಕ ನೋವಿನಿಂದ ನರಳುತ್ತಿದ್ದಳು; ಚಿಕಿತ್ಸೆ ಅವಳನ್ನು ಅತ್ಯಂತ ಗಾಸಿಗೊಳಿಸುತ್ತಿತ್ತು. ಅಂದು ನೀನಾ ರೇಡಿಯೇಶನ್ ನಂತರ ಮನೆಗೆ ಬಂದಾಗ ಅವಳ ಸ್ಥಿತಿ ಅತ್ಯಂತ ಹದಗೆಟ್ಟಿತ್ತು. ಅವಳ ಸುತ್ತಮುತ್ತಲಿನ ವಾತಾವರಣ ವಿಷಾದಮಯವಾಗುತ್ತಿತ್ತು. ಅವಳ ಸಿಟಿಂಗ್ ದಿನ ಕರೀನಾ ಮತ್ತು ಜೊಹಾನಾ ಅವಳೊಂದಿಗೇ ಇರುತ್ತಿದ್ದರು. ಕರೀನಾ ಲಂಡನ್‌ನಿಂದ ಬರುತ್ತಿದ್ದಳು. ತಮ್ಮ ತಾಯಿಯ ಆರೋಗ್ಯ ದಿನೇ ದಿನೇ ಕುಸಿಯುತ್ತಿರುವುದನ್ನು ನೋಡಿ ಇಬ್ಬರು ಮಕ್ಕಳು ತುಂಬಾ ನೊಂದಿದ್ದರು. ಅವರ ಜೀವನದಲ್ಲಿ ತಂದೆಯ ಅಸ್ತಿತ್ವವೇ ಇಲ್ಲದಂತಿತ್ತು, ಅವರಿಗೆ ತಾಯಿ ಮಾತ್ರವಿದ್ದಳು. ಈಗ ತಾಯಿ ಸಹ ಅಂತಿಮ ದಿನವನ್ನು ಎಣಿಸುತ್ತಿದ್ದಳು. ಕರೀನಾ ನೀನಾಳನ್ನು ಕೇಳಿದಳು, ‘ಮಮ್ಮಿ, ನಿಮ್ಮಾಸೆ ಏನಿದೆ?’

ನೀನಾ ಮೂರ್ಛಾವಸ್ಥೆಯಲ್ಲಿ ಹೇಳಿದಳು, ‘ನಿನ್ನ ಮದುವೆಯನ್ನು ನೋಡಬೇಕು.’

ಇಪ್ಪತ್ತೈದರ ಕರೀನಾ ತನ್ನ ತಾಯಿಯ ಕೊನೆಯ ಆಸೆಯನ್ನು ಈಡೇರಿಸಲು ನಿರ್ಧರಿಸಿದಳು. ತನ್ನ ಬಾಯ್‌ಫ್ರೆಂಡ್ ಕಾಸ್ಪರ್‌ನನ್ನು ವಿವಾಹಕ್ಕೆ ಆಗ್ರಹಿಸಿದಳು; ಅವರ ವಿವಾಹ ನಿಶ್ಚಿತವಾಯಿತು.

ಸುಮಾರು ನೂರು ಜನರನ್ನು ವಿವಾಹದ ಸಮಾರಂಭಕ್ಕೆ ಆಹ್ವಾನಿಸಲಾಗಿತ್ತು. ಅವರಲ್ಲಿ ನಾನೂ ಇದ್ದೆ. ಕಾಸ್ಪರ್‌ನ ಇಡೀ ಪರಿವಾರ ಮತ್ತು ಸಂಬಂಧಿಕರು ಲೈಮ್‌ಲೈಟ್‌ನಲ್ಲಿದ್ದರು. ಅತಿ ಹೆಚ್ಚು ಸಂತಸವನ್ನು ಅವರೇ ಅನುಭವಿಸುತ್ತಿದ್ದರು. ಕರೀನಾ–ಕಾಸ್ಪರ್‌ನ ಮಿತ್ರರು ಸಹ ಕುಡಿದು ನಶೆಯೇರಿಸಿಕೊಂಡು ತಮ್ಮ ಉತ್ಸಾಹವನ್ನು ಪ್ರದರ್ಶಿಸುತ್ತಿದ್ದರು. ರಾಮಚಂದ್ರ ಮತ್ತು ಶೀಲಾ ದೇವಿಯವರ ಭಾರತದ ಮಿತ್ರರು ಗಂಭೀರವಾಗಿದ್ದರು. ನವೀನ್ ಮತ್ತು ಆದಿತ್ಯ, ನೀನಾಳ ಪ್ರತಿಯೊಂದು ಸಮಾರಂಭವನ್ನು ತಮ್ಮ ಸಮಾರಂಭವೆಂದು ತಿಳಿಯುತ್ತಿದ್ದರು, ಹೀಗಾಗಿ ಅವರು ಮೇಲುಸ್ತುವಾರಿಯಲ್ಲಿರುವಂತೆ ಕಾಣಬರುತ್ತಿದ್ದರು.

ವಧುವಿನ ಅಸಲಿ ತಂದೆ ಆಲಿವರ್ ಸಹ ತನ್ನ ಗುಂಪಿನೊಂದಿಗೆ ಹಾಜರಾಗಿದ್ದ. ಅವನು ರಿಬ್ಬನ್ ಕತ್ತರಿಸಲು ಬಂದಿದ್ದಾನೆಂದು ತೋರುತ್ತಿತ್ತು. ಅವನ ಎರಡನೆಯ ಹೆಂಡತಿಗೆ ಜನಿಸಿದ ಇಬ್ಬರು ಮಕ್ಕಳು, ಅವನ ತಂದೆ–ತಾಯಿ ಮತ್ತು ಸಹೋದರ–ಬಂಧುಗಳು ಸಹ ವಿವಾಹ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಆಲಿವರ್ ಮತ್ತು ಅವನ ನಾಲ್ವರು ಮಕ್ಕಳು ಕಲೆತಾಗ ಒಂದು ಸುಖದ ಪರಿವಾರವಾಗುತ್ತಿತ್ತು. ಎಲ್ಲರೂ ಪರಸ್ಪರ ವಿನಯದಿಂದ ವರ್ತಿಸುತ್ತಿದ್ದರು. ಪರಸ್ಪರ ಪ್ರೀತಿಸುತ್ತಿದ್ದರು. ವಿವಾಹದ ಏರ್ಪಾಡುಗಳನ್ನು ನೀನಾಳ ತಂದೆ–ತಾಯಿ ರಾಮಚಂದ್ರ ಮತ್ತು ಶೀಲಾ ದೇವಿಯವರೇ ಮಾಡಿದ್ದಾರೆಂಬುದು ನನಗೆ ತಿಳಿದಿತ್ತು.

ಅವರು ಒಂದು ವೆಡ್ಡಿಂಗ್ ಕಂಪನಿ ‘ಗ್ಲೋಬಲ್ ಎಕ್ಸ್‌ಪ್ರೆಸ್ ವೆಡ್ಡಿಂಗ್ ಏಜೆನ್ಸಿ’ಯನ್ನು ನೇಮಕ ಮಾಡಿದ್ದರು. ಈ ಕಂಪನಿ ರಮಣೀಯ ಸ್ಥಳದಲ್ಲಿ ರಚನಾತ್ಮಕವಾಗಿ ಮತ್ತು ರೊಮ್ಯಾಂಟಿಕ್ ಆಗಿ ವಿವಾಹ ಸಮಾರಂಭವನ್ನು ಏರ್ಪಡಿಸಿತ್ತು. ಅದೊಂದು ರಾಯಲ್ ಸ್ವಯಂವರವೆಂದು ತೋರುತ್ತಿತ್ತು. ವೆಡ್ಡಿಂಗ್ ಕಂಪನಿಯು ವಿವಾಹ ಸಮಾರಂಭವನ್ನು ಅವಿಸ್ಮರಣೀಯ ಘಟನೆಯನ್ನಾಗಿ ಮಾಡಲು ಪ್ರಯತ್ನಿಸಿತ್ತು. ಒಂದು ರಮಣೀಯ ಸ್ಥಳದಲ್ಲಿ ಒಂದು ಅದ್ಭುತ ವಿವಾಹದ ಸಮಾರಂಭ... ನಾನು ಅದನ್ನು ನೋಡಿ ತುಂಬಾ ಪ್ರಭಾವಕ್ಕೊಳಗಾದೆ. ಇಂದು ನಾನು ಕಪ್ಪು ಸೂಟ್ ಮತ್ತು ಟೈ ಧರಿಸಿದ್ದೆ, ಇವುಗಳನ್ನು ನೀನಾ ನನ್ನ ಐವತ್ತನೆಯ ಹುಟ್ಟುಹಬ್ಬದಂದು ನನಗೆ ಉಡುಗೊರೆಯಾಗಿ ಕೊಟ್ಟಿದ್ದಳು. ನಾನು ನನ್ನ ಕಿಲ್ಟ್ ಧರಿಸಿರಲಿಲ್ಲ, ಏಕೆಂದರೆ ನೀನಾ ನನ್ನ ಆ ಡ್ರೆಸ್ ಇಷ್ಟಪಡುತ್ತಿರಲಿಲ್ಲ. ಒಂದು ವೇಳೆ ನಾನು ನೀನಾಳ ಇಷ್ಟ ಮತ್ತು ಇಷ್ಟವಿಲ್ಲದ್ದುದ್ದಕ್ಕೆ ಗಮನವನ್ನು ಕೊಟ್ಟಿದ್ದರೆ ಬಹುಶಃ ನಾವೆಂದೂ ಬೇರೆಯಾಗುತ್ತಿರಲಿಲ್ಲ.

ನೀನಾಳ ತಾಯಿ ನೀನಾಳನ್ನು ಒಂದು ವ್ಹೀಲ್ ಚೇರಿನಲ್ಲಿ ಕರೆತಂದರು. ಎಲ್ಲರ ದೃಷ್ಟಿ ನೀನಾಳೆಡೆಗೆ ಹರಿಯಿತು. ನೀನಾ ಸೀರೆಯನ್ನು ಉಟ್ಟಿದ್ದು, ಬಿಂದಿಯನ್ನು ಇಟ್ಟುಕೊಂಡಿದ್ದಳು. ಆಭರಣಗಳನ್ನು ಧರಿಸಿದ್ದ ಅವಳು ರೋಗಿಯಾದರೂ ಸುಂದರಿಯಾಗಿ ಕಾಣಿಸುತ್ತಿದ್ದಳು. ನನಗಂತೂ ನೀನಾ ಸುಂದರಿಯಾಗಿಯೇ ತೋರುತ್ತಿದ್ದಳು. ನನಗೆ ರಾಮಚಂದ್ರರು ಮತ್ತು ಶೀಲಾ ದೇವಿಯ ಬಗ್ಗೆ ದಯೆ ಮೂಡುತ್ತಿತ್ತು. ಅವರ ಬಳಿ ಇಷ್ಟೆಲ್ಲಾ ಇದ್ದಾಗ್ಯೂ ಅವರಿಬ್ಬರು ಎಲ್ಲವನ್ನೂ ಕಳೆದುಕೊಂಡವರಂತೆ ಕಾಣಬರುತ್ತಿದ್ದರು. ಸೋತ ಭಾವನೆ ಇಬ್ಬರ ಮುಖದಲ್ಲಿ ಆವರಿಸಿರುತ್ತಿತ್ತು. ಅವರನ್ನು ನೋಡಿದಾಗ ನನಗೆ ಅದೇಕೋ ಒಂದು ವಿಧದ ಶಾಂತಿ ಲಭಿಸುತ್ತಿತ್ತು. ಅವರು ಸುಶಿಕ್ಷಿತರು, ಅನುಭವಿಗಳು ಮತ್ತು ಜ್ಞಾನಿ ದಂಪತಿಗಳಾಗಿದ್ದರು.

ನೀನಾ ಮತ್ತು ನನ್ನ ವಿಚ್ಛೇದನದ ನಂತರ ಅದೊಂದು ದಿನ ಡಾಕ್ಟರ್ ಶ್ರೀನಿವಾಸನ್‌ರು ನನ್ನನ್ನು ತಮ್ಮ ಮನೆಗೆ ಕರೆಸಿದ್ದರು. ಅವರು ನನ್ನೊಂದಿಗಿನ ವಾದ ಮತ್ತು ಹರಟೆಯನ್ನು ಮಿಸ್ ಮಾಡಿಕೊಳ್ಳುತ್ತಿರುವುದಾಗಿ ಹೇಳುತ್ತಿದ್ದರು. ನೀನಾಳ ಹೊಸ ಪಾರ್ಟ್‌ನರ್ ಪೀಟರ್‌ಗೆ ಅವರ ಮಾತುಗಳಲ್ಲಿ ಯಾವುದೇ ಆಸಕ್ತಿಯಿರಲಿಲ್ಲ. ಅವನು ಅವರ ಮನೆಗೂ ಬರುತ್ತಿರಲಿಲ್ಲ. ಅವರು ನೀನಾ ಮತ್ತು ನನ್ನ ವಿಚ್ಛೇದನದ ಸಂದರ್ಭದಲ್ಲಿ ಹೇಳಿದ್ದರು, ‘ನಮ್ಮಿಬ್ಬರಲ್ಲೂ ಜಗಳವಾಗುತ್ತಿತ್ತು; ಮೊದಲ ಜಗಳ ಎರಡನೆಯ ಜಗಳಕ್ಕಿಂತ ಭಿನ್ನವಾಗಿರುತ್ತಿರಲಿಲ್ಲ. ಆದರೆ ನಮ್ಮ ದಾಂಪತ್ಯ ಜೀವನ ಗಟ್ಟಿಯಾಗಿತ್ತು; ಏಕೆಂದರೆ ನಮಗೆ ಜೀವಮಾನವಿಡೀ ಜಗಳಾಡುವ ಸಾಮರ್ಥ್ಯವಿತ್ತು. ನಾವು ಜಗಳಾಡಬಲ್ಲೆವು ಹಾಗೂ ಪ್ರೀತಿಸಲೂ ಬಲ್ಲೆವು. ನೀವು ಜೀವಮಾನವಿಡೀ ಜಗಳ ಮಾಡಲಾರಿರಿ, ಬೇಗನೇ ಸೋಲುತ್ತೀರಿ.’

ಶ್ರೀನಿವಾಸನ್ ದಂಪತಿಗಳ ಜೀವನದಲ್ಲಿ ನೀನಾಳೇ ಏಕಮಾತ್ರ ತೊಡಕಾಗಿದ್ದಳು. ಆದರೆ ನೀನಾ ಮತ್ತು ಅವಳ ಪುತ್ರಿಯರೇ ಅವರ ಜಗತ್ತಾಗಿತ್ತು. ನಾನು ಅವರ ಕೆಲವು ಭಾರತೀಯ ಮಿತ್ರರಿಂದ, ಕರೀನಾ ಮತ್ತು ಜೊಹಾನಾ ಏನೂ ಸಂಪಾದಿಸದಿದ್ದಾಗ್ಯೂ ತಮ್ಮ ಅಜ್ಜ–ಅಜ್ಜಿ ಕೊಡಿಟ್ಟ ಹಣದಲ್ಲಿ ನಿಶ್ಚಿಂತೆಯಿಂದ ಜೀವನವನ್ನು ಕಳೆಯಬಹುದು ಎಂಬ ವಿಷಯವನ್ನು ಕೇಳಿದ್ದೆ.

ಸರಿ, ವಿವಾಹದ ಮುಹೂರ್ತ ಬಂದಾಗ ಆಲಿವರ್ ತನ್ನ ಮಗಳ ಕೈ ಹಿಡಿದು ವಿವಾಹ ಮಂಟಪಕ್ಕೆ ದರ್ಪದಿಂದ ಬಂದು ವರನಾಗಿ ನಿಂತಿದ್ದ ಕಾಸ್ಪರ್ ಪ್ರೆಸ್ಕೋರ್ಟ್‌ನ ಕೈಗೆ ತನ್ನ ಮಗಳ ಕೈಯನ್ನಿಟ್ಟು ಹೇಳಿದ, ‘ನನ್ನ ಮಗಳನ್ನು ಸಂತೋಷವಾಗಿಡು.’

ಸೂಟು ಬೂಟಿನಲ್ಲಿ ಅಲಂಕೃತನಾಗಿದ್ದ ಕಾಸ್ಪರ್ ಮುಗುಳ್ನಗುತ್ತಾ ಒಪ್ಪಿಗೆಯಲ್ಲಿ ತಲೆಯಾಡಿಸಿದ.

ತನ್ನ ತಂದೆ ತನ್ನ ವಿವಾಹದ ಪಾರಂಪರಿಕ ಪದ್ಧತಿಗಳನ್ನು ನಿರ್ವಹಿಸಬೇಕೆಂಬುದು ಕರೀನಾಳ ಇಚ್ಛೆಯಾಗಿತ್ತು. ನಿಸ್ಸಂದೇಹವಾಗಿ ಇದೊಂದು ಹೃದಯಸ್ಪರ್ಶಿ ದೃಶ್ಯವಾಗಿತ್ತು. ಇದು ಅತಿಥಿಗಳನ್ನು ಭಾವಪರವಶಗೊಳಿಸುತ್ತಿತ್ತು. ಅವರು ಚಪ್ಪಾಳೆ ತಟ್ಟಿದರು, ಸಂವೇದನಾಶೀಲರಾಗಿದ್ದ ಕೆಲವರು ತಮ್ಮ ತುಂಬಿ ಬಂದ ಕಣ್ಣುಗಳನ್ನು ಒರೆಸಿಕೊಂಡರು. ವಿವಾಹಸೂತ್ರದಲ್ಲಿ ಬಂಧಿಸಲ್ಪಟ್ಟ ನಂತರ ಕರೀನಾ ಮತ್ತು ಕಾಸ್ಪರ್ ಆಶೀರ್ವಾದವನ್ನು ಪಡೆಯಲು ನೀನಾಳ ಸಮೀಪಕ್ಕೆ ಬಂದಾಗ ವಾತಾವರಣ ಇನ್ನಷ್ಟು ಸೂಕ್ಷ್ಮವಾಯಿತು. ಇಬ್ಬರೂ ನೀನಾಳನ್ನು ತಬ್ಬಿಕೊಂಡರು. ನೀನಾ ತನ್ನ ದುರ್ಬಲ ಕೈಗಳಿಂದ ಇಬ್ಬರ ತಲೆಯನ್ನು ನೇವರಿಸುತ್ತಾ ಇಬ್ಬರನ್ನು ಆಶೀರ್ವದಿಸಿದಳು. ಅನೇಕರ ಕಣ್ಣುಗಳು ಮತ್ತೆ ತುಂಬಿ ಬಂದವು, ನನ್ನ ಕಣ್ಣುಗಳು ಸಹ ಒದ್ದೆಯಾದವು. ವಿವಾಹ ಸಮಾರಂಭ ಎಷ್ಟೇ ರೊಮ್ಯಾಂಟಿಕ್ ಆಗಿದ್ದಾಗ್ಯೂ ಕೆಲವು ಭಾವುಕ ಕ್ಷಣಗಳು ಜನರ ಹೃದಯವನ್ನು ಸ್ಪರ್ಶಿಸುತ್ತವೆ. ಹೀಗಾಗಿಯೇ ವಿವಾಹ ಸಮಾರಂಭಗಳಲ್ಲಿ ನಗು, ಹಾಸ್ಯ, ಆನಂದ, ತಮಾಷೆ, ಕಣ್ಣೀರು ಮತ್ತು ನೋವಿನ ಸಮನ್ವಯಗಳಿರುತ್ತವೆ.

(ಸಶೇಷ)